
ಸಂಗ್ರಹ: ಕೆ. ನಿರುಪಮಾ

# ಬರಿಗೈ ದಾಸರು



ಗಂಗೆಯಲ್ಲಿ ಓರ್ವ ವ್ಯಾಪಾರಿ ಸ್ನಾನ ಮಾಡುತ್ತಿದ್ದ. ಆಗ ಒಂದು ಸುಂದರವಾದ ಕೋಲು (ವಾಕಿಂಗ್ ಸ್ಟಿಕ್) ತೇಲಿ ಬಂತು. ಅದನ್ನು ತೆಗೆದುಕೊಂಡು ದಡದತ್ತ ಬರುವಾಗ ಸುಳಿಯಲ್ಲಿ ಸಿಕ್ಕಿ, ಬಹಳ ಪ್ರಯಾಸ ಪಟ್ಟು ದಡ ಸೇರಿದ. ಆದರೆ ಕೋಲು ಎಲ್ಲೋ ಜಾರಿ ಹೋಯಿತು. ದಡ ಸೇರಿದವನು ಸುಂದರವಾದ ಕೈಗೋಲು ಹೋಯಿತಲ್ಲ ಎಂದು ಬೊಬ್ಬಿಟ್ಟ. ಅದನ್ನು ನೋಡಿ ಅಲ್ಲಿದ್ದ ಸಂನ್ಯಾಸಿಯೊಬ್ಬರು, 'ಸ್ವಾಮಿ! ನೀವು ಸ್ನಾನಕ್ಕೆ ಇಳಿದಾಗ ಬರಿಗೈಯಲ್ಲೇ ಇದ್ದೀರಿ; ಈಗ ಕೋಲು ಹೋಯಿತೆಂದು ಅಳುವಿರಲ್ಲ?' ಎಂದು ಕೇಳಿದರು. ವ್ಯಾಪಾರಿ ನಡೆದದ್ದನ್ನೆಲ್ಲ ವಿವರಿಸಿದ.

ಸಂನ್ಯಾಸಿ, 'ನಿಮ್ಮನ್ನು ನೋಡಿದರೆ ನಗು ಬರುತ್ತದೆ! ಗಂಗೆಯಲ್ಲಿ ಕೋಲು ತೇಲಿ ಬಂತು; ಈಗಲೂ ಅದು ಗಂಗೆಯಲ್ಲೇ ತೇಲುತ್ತಿದೆ! ಹಾಗಿರುವಾಗ ಅದು ನಿಮ್ಮ ಕೋಲೆಂದು ಹೇಗೆ ಹೇಳುತ್ತೀರಿ? ಅದನ್ನು ಎರಡು ನಿಮಿಷಗಳ ಕಾಲ ನಿಮ್ಮ ಕೈಯಲ್ಲಿ ಹಿಡಿದಿದ್ದಕ್ಕೆ ಅದು ನಿಮ್ಮದೆಂದು ಹಕ್ಕು ಸಾಧಿಸುತ್ತೀರಲ್ಲ? ಜೀವನದಲ್ಲಿ ಯಾವುದೂ ಸ್ಥಿರವಲ್ಲ. ಹುಟ್ಟುವಾಗ ಯಾರೂ ಏನನ್ನೂ ತರಲಿಲ್ಲ; ಹೋಗುವಾಗ ಏನನ್ನೂ ಕೊಂಡೊಯ್ಯುವುದಿಲ್ಲ! ನಾವೆಲ್ಲರೂ ಬರಿಗೈ ದಾಸರೇ. ಆದರೆ ಜೀವಮಾನದಲ್ಲಿ ಹಲವು ವಸ್ತುಗಳನ್ನು ನಮ್ಮದು ಎಂದು ಭ್ರಮಿಸಿ ಹಕ್ಕು ಸಾಧಿಸುತ್ತೇವೆ! ನಮ್ಮ ದುಃಖಗಳಿಗೆಲ್ಲ ಅದೇ ಕಾರಣ!' ಎಂದಾಗ ವ್ಯಾಪಾರಿ ದುಃಖಿಸುವುದನ್ನು ನಿಲ್ಲಿಸಿ ಯೋಚನಾಮಗ್ನನಾದ.